RNU AIR DHARWAD

MARCH 30, 2024

ALL INDIA RADIO- DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ–ಪ್ರದೇಶ ಸಮಾಚಾರ

<><><>

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ; ಮತದಾರ ಜಾಗ್ರತಿಗಾಗಿ, ಜಿಲ್ಲಾಡಳಿತಗಳಿಂದ ವಿಶೇಷ ಪ್ರಯತ್ನ.
- ಬಿಸಿ ಗಾಳಿ, ವಿಪರೀತ ಸೆಕೆ; ಹವಾಮಾನದ ಮಾಹಿತಿ ಪಡೆದು, ಅಂದಿನ ಕೆಲಸ ಯೋಜಿಸಿಕೊಳ್ಳುವಂತೆ, ವಾರ್ತಾ ಇಲಾಖೆ ಮನವಿ.
- ಕ್ರೈಸ್ತ ಬಾಂಧವರಿಂದ, ಇಂದು ಜಾಗರಣೆ; ನಾಳೆ ಈಸ್ಟರ್ ಭಾನುವಾರ ಆಚರಣೆ.
- ಕೊಡಗು ಜಿಲ್ಲೆಯ ನಾಪೋಕ್ಲುವಿನಲ್ಲಿ, ಇಂದಿನಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆರಂಭ.

<><><>

ಈಗ ವಾರ್ತೆಗಳ ವಿವರ

<><><>

ಧಾರವಾಡ ಮಹಾನಗರ ಪಾಲಿಕೆ ವತಿಯಿಂದ, ಹುಬ್ಬಳ್ಳಿ ಮಹಾನಗರದ ವಿವಿಧ ಪ್ರತಿಷ್ಠಿತ ಮಾಲ್ ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ, ಮತದಾರ ಜಾಗೃತಿ ಕಾರ್ಯಕ್ರಮ ಜರುಗಿತು. ಮತದಾನದ ಕುರಿತು ಸೆಲ್ಫೀ ಪಾಯಿಂಟ್ ಹಾಗೂ ಸ್ಟ್ಯಾಂಡೀಸ್, ಯುವ ಮತದಾರರ ಗಮನ ಸೆಳೆಯುತ್ತಿವೆ ಎಂದು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ, ಈಶ್ವರ ಉಳಾಗಡ್ಡಿ ತಿಳಿಸಿದ್ದಾರೆ.

<><><>

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 17 ಸಾವಿರದ 1 ಸಂಖ್ಯೆಯ ವಿಕಲಚೇತನ ಮತದಾರರನ್ನು, ನೋಂದಾಯಿಸಲಾಗಿದೆ ಎಂದು, ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪಿ. ಲಕ್ಷ್ಮೀ ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆಯಲ್ಲಿ, ಕಳೆದ ಬಾರಿ ಕಡಿಮೆ ಮತದಾನವಾಗಿರುವ ಮತಗಟ್ಟೆಗಳನ್ನು ಗುರುತಿಸಿ, ಸ್ವೀಪ್ ಚಟುವಟಿಕೆ ಚುರುಕುಗೊಳಿಸಲಾಗಿದೆ ಎಂದು, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಅಕ್ಷಯ್ ಶ್ರೀಧರ್ ಮಾಹಿತಿ ನೀಡಿದ್ದಾರೆ.

<><><>

ಕಲಬುರಗಿ ಲೋಕಸಭಾ ಕ್ಷೇತ್ರದ, ಯಾದಗಿರಿ ಜಿಲ್ಲೆ ಗುರುಮಠಕಲ್ ಬಳಿಯ, ಯರಗೋಳ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿದ ಚುನಾವಣಾಧಿಕಾರಿ, ಬಿ.ಫೌಜಿಯಾ ತರನ್ನುಮ್ ಅವರು, ಅತೀ ಸೂಕ್ಷ್ಮ ಮತಗಟ್ಟೆಗಳನ್ನು ಪರಿಶೀಲಿಸಿದರು.

<><><>

ರಾಯಚೂರು ರೈಡರ್ಸ್ ವತಿಯಿಂದ, ಮತದಾರ ಜಾಗೃತಿಗಾಗಿ, ಸೈಕಲ್ ಜಾಥಾ ಜರುಗಿತು.

<><><>

ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರದ, ಬಂಟ್ವಾಳ ತಾಲೂಕಿನ ಮಂಚಿ ಗ್ರಾಮ ಪಂಚಾಯತ್ ವ್ಯಾಪ್ತಿಯ, ಕುಕ್ಕಾಜೆ ಮತಗಟ್ಟೆಗೆ ಯಕ್ಷಗಾನದ ಮೆರುಗು ನೀಡಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಡಾಕ್ಟರ್ ಆನಂದ್ ತಿಳಿಸಿದ್ದಾರೆ.

<><><>

ಮೈಸೂರು, ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಬಗ್ಗೆ, ನಿಗಾ ವಹಿಸಿ ವರದಿ ಸಲ್ಲಿಸುವಂತೆ, ವೆಚ್ಚ ವೀಕ್ಷಕ ಯೋಗೀಶ್ ಮಿಶ್ರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ ಚುನಾವಣಾಧಿಕಾರಿ, ಗಂಗೂಬಾಯಿ ಮಾನಕರ ಅವರು, ಕಿತ್ತೂರು ತಾಲೂಕಿನ ಕುಳವಳ್ಳಿ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಚುನಾವಣಾ ವೆಚ್ಚ ವೀಕ್ಷಕರನ್ನಾಗಿ, ಅಲೋಕ್ ಕುಮಾರ್ ಅವರನ್ನು, ಚುನಾವಣಾ ಆಯೋಗ ನೇಮಿಸಿದೆ.

<><><>

ಉಡುಪಿ ಬಳಿ, ಶಿರೂರಿನ ಅಳ್ವೆಗದ್ದೆ ಮೀನುಗಾರಿಕಾ ಲಂಗರು ಪ್ರದೇಶದಲ್ಲಿ, ಮತದಾರ ಜಾಗೃತಿ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ವಿದ್ಯಾಕುಮಾರಿ ಚಾಲನೆ ನೀಡಿದರು.

<><><>

ಲೋಕಸಭಾ ಚುನಾವಣೆ ಹಿನ್ನೆಲೆ, ಮುಂಜಾಗ್ರತಾ ಕ್ರಮವಾಗಿ ಬೆಳಗಾವಿ ಜಿಲ್ಲೆ ಚಿಕ್ಕೋಡಿ ಪಟ್ಟಣದಲ್ಲಿ, ಉಪ ಪೊಲೀಸ್ ವರಿಷ್ಠಾಧಿಕಾರಿ ಗೋಪಾಲಕೃಷ್ಣ ಗೌಡರ ನೇತೃತ್ವದಲ್ಲಿ ಪಥಸಂಚಲನ ನಡೆಯಿತು.

<><><>

ಅಂಗವಿಕಲರು, ಲೈಂಗಿಕ ಅಲ್ಪಸಂಖ್ಯಾತರು ಸೇರಿದಂತೆ, ಧ್ವನಿ ಇಲ್ಲದ ಜನ, ಮತದಾನದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವ ಮೂಲಕ, ಸಂವಿಧಾನದ ಆಶಯ ಮತ್ತು ಘನತೆಯನ್ನು ಎತ್ತಿ ಹಿಡಿಯಬೇಕು ಎಂದು, ಕೇಂದ್ರ ಚುನಾವಣಾ ಆಯೋಗದ ಸಲಹಾ ಸಮಿತಿ ಸದಸ್ಯೆ ಡಾಕ್ಟರ್ ಅಕ್ಕೈ ಪದ್ಮಶಾಲಿ ಕೋರಿದ್ದಾರೆ.

ತುಮಕೂರು ಜಿಲ್ಲೆ ಸ್ವೀಪ್ ಸಮಿತಿ 132ನೇ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ, ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

<><><>

ಡಾ. ಅಕ್ಕೈ ಪದ್ಮಶಾಲಿ ಧ್ವನಿ 22 ಸೆಕೆಂದುಗಳು

<><><>

ಕಳೆದ ಚುನಾವಣೆಗಳಲ್ಲಿ, ಕಡಿಮೆ ಮತದಾನ ನಡೆದ ಮತಗಟ್ಟೆಗಳ ವ್ಯಾಪ್ತಿಯ ಮತದಾರರು, ಕಡ್ಡಾಯವಾಗಿ 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯಲ್ಲಿ, ತಮ್ಮ ಮತ ಚಲಾಯಿಸುವಂತೆ ಮನವೊಲಿಸಲಾಗುವುದು ಎಂದು, ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸೋಮಶೇಖರ್ ತಿಳಿಸಿದ್ದಾರೆ. ಚಿತ್ರದುರ್ಗ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಮತದಾರ ಜಾಗ್ರತಿ ಅಭಿಯಾನಕ್ಕೆ ಚಾಲನೆ ನೀಡಿ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದರು.

<><><>

ಸೋಮಶೇಖರ್ ಧ್ವನಿ 30 ಸೆಕೆಂದುಗಳು

<><><>

ಚುನಾವಣಾ ನೀತಿ ಉಲ್ಲಂಘನೆ ಸಂಬಂಧಿಸಿ, ಈ ವರೆಗೆ 79 ಸಾವಿರಕ್ಕೂ ಹೆಚ್ಚು ದೂರುಗಳನ್ನು ಸಿ ವಿಜಿಲ್ ಆ್ಯಪ್ ಮೂಲಕ ಸ್ವೀಕರಿಸಲಾಗಿದೆ ಎಂದು, ಚುನಾವಣಾ ಆಯೋಗ ಪ್ರಕಟಿಸಿದೆ.

<><><>

ಚಿತ್ರದುರ್ಗ ಜಿಲ್ಲೆ, ಹಿರಿಯೂರು ವ್ಯಾಪ್ತಿಯಲ್ಲಿ, ಎರಡು ಪ್ರತ್ಯೇಕ ಪ್ರಕರಣಗಳಲ್ಲಿ, 5.29 ಕಿಲೋ ಚಿನ್ನಾಭರಣ ಹಾಗೂ 6 ಲಕ್ಷದ 80 ಸಾವಿರ ರೂಪಾಯಿ ಸಂಚಾರಿ ಕಣ್ಗಾವಲು ತಂಡ, ವಶ ಪಡಿಸಿಕೊಂಡಿದೆ.

<><><>

ಉತ್ತರಕನ್ನಡ ಜಿಲ್ಲೆಯ ಎರಡು ಚೆಕ್ ಪೋಸ್ಟ್‌ಗಳಲ್ಲಿ, ಸೂಕ್ತ ದಾಖಲೆಗಳಿಲ್ಲದ 9 ಲಕ್ಷದ 18 ಸಾವಿರ ರೂಪಾಯಿ ಹಣವನ್ನು, ಚುನಾವಣಾಧಿಕಾರಿ ವಶ ಪಡಿಸಿಕೊಂಡಿದ್ದಾರೆ.

<><><>

ಧಾರವಾಡ ಜಿಲ್ಲೆಯ ಮೂರು ಚೆಕ್ ಪೋಸ್ಟ್‌ಗಳಲ್ಲಿ, ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಪ್ರಕರಣದಡಿ, ಒಟ್ಟು 6 ಲಕ್ಷ 89 ಸಾವಿರದ 500 ರೂಪಾಯಿ ನಗದು, ವಶ ಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆ, ಸಾಗರದ ಚೆಕ್ ಪೋಸ್ಟ್‌ನಲ್ಲಿ, ಅಂದಾಜು 2 ಲಕ್ಷ 23 ಸಾವಿರ ರೂಪಾಯಿ ಮೌಲ್ಯದ, ಅಕ್ರಮ ಮದ್ಯ ವಶಪಡಿಸಿಕೊಳ್ಳಲಾಗಿದೆ.

<><><>

ಕಲಬುರಗಿ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯ, ಚಿತ್ತಾಪುರ ವಿಧಾನಸಭಾ ಕ್ಷೇತ್ರದ ನಾಲವಾರ ಚೆಕ್‌ಪೋಸ್ಟ್‌ನಲ್ಲಿ, ದಾಖಲೆ ಇಲ್ಲದೆ ಸಾಗಿಸುತ್ತಿದ್ದ, ಅಂದಾಜು 115 ಗ್ರಾಂ ಚಿನ್ನ, 3 ಕಿಲೋ ಬೆಳ್ಳಿಯನ್ನು, ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉತ್ತರ ಒಳನಾಡಿನ 6 ಜಿಲ್ಲೆಗಳಲ್ಲಿ ಮುಂಬರುವ 2 ದಿನ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕಲಬುರಗಿ, ಬಾಗಲಕೋಟೆ, ರಾಯಚೂರು, ವಿಜಯಪುರ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆ ಇದ್ದು, ಗರಿಷ್ಠ ತಾಪಮಾನ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

<><><>

ರಾಜ್ಯದಲ್ಲಿ ಗರಿಷ್ಠ ಉಷ್ಣಾಂಶ 40.9 ಡಿಗ್ರಿ ಸೆಲ್ಸಿಯಸ್ ಕಲಬುರಗಿಯಲ್ಲಿ ಹಾಗೂ ಕನಿಷ್ಠ ಉಷ್ಣಾಂಶ 19.5 ಡಿಗ್ರಿ ಸೆಲ್ಸಿಯಸ್ ಚಾಮರಾಜನಗರದಲ್ಲಿ ದಾಖಲಾಗಿದೆ.

<><><>

ಸುಡುವ ಬಿಸಿಲು, ಬಿಸಿ ಗಾಳಿ, ವಿಪರೀತ ಸೆಕೆಯನ್ನು ಸಹಿಸಿಕೊಳ್ಳುವುದು ರಾಜ್ಯದ ಜನತೆಗೆ ಕ ್ಟವಾಗಿದೆ. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ ಜನ ವಿಶೇಷವಾಗಿ ಮುತುವರ್ಜಿ ವಹಿಸುವಂತೆ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೋರಿದೆ. ಆಕಾಶವಾಣಿ, ದೂರದರ್ಶನ ಅಥವಾ ದಿನಪತ್ರಿಕೆಗಳ ಮೂಲಕ, ಸ್ಥಳೀಯ ಹವಾಮಾನದ ಮಾಹಿತಿ ಪಡೆದು, ದೈನಂದಿನ ಚಟುವಟಿಕೆ ಯೋಜಿಸಿಕೊಳ್ಳುವಂತೆ, ತಂಪು ಪಾನೀಯ ಸೇವಿಸಿ, ನಿರ್ಜಲೀಕರಣಕ್ಕೆ ಒಳಗಾಗದಂತೆ ಮುಂಜಾಗ್ರತೆ ವಹಿಸಲು, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ, ವಾರ್ತಾ ಇಲಾಖೆ ಮನವಿ ಮಾಡಿದೆ.

<><><>

ಕಾಯ್ದ ಕೆಂಡದಂತಾಗಿರುವ, ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಮಲ್ಕಂದಿನ್ನಿ ಗ್ರಾಮದ, ಕೂಲಿ ಕಾರ್ಮಿಕ ಆಂಜನೇಯ, ತಮ್ಮ ದುಡಿಮೆ ಹಣದಲ್ಲಿ, ಗ್ರಾಮದ 8ನೇ ತರಗತಿಯ 11 ವಿದ್ಯಾರ್ಥಿಗಳಿಗೆ, 60 ಸಾವಿರ ರೂಪಾಯಿ ಖರ್ಚಿಸಿ, 11 ಸೈಕಲ್ ಕೊಡಿಸಿ ಮಾದರಿಯಾಗಿದ್ದಾರೆ. ಮಲ್ಕಂದಿನ್ನಿ ಗ್ರಾಮದಿಂದ, 5 ಕಿಲೋ ಮೀಟರ ದೂರದ ಹೇಮನೂರಿನ ಪ್ರೌಢಶಾಲೆಗೆ ನಿತ್ಯ ವಿದ್ಯಾರ್ಥಿಗಳು ನಡೆದುಕೊಂಡು ಹೋಗುತ್ತಾರೆ. ಆಂಜನೇಯ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ, ಹೇಮನೂರಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ಬಸವರಾಜ.

<><><>

ಮುಖ್ಯ ಶಿಕ್ಷಕ ಬಸವರಾಜ ಧ್ವನಿ 45 ಸೆಕೆಂದುಗಳು

<><><>

ಗುಡ್ ಫ್ರೈ ಡೇ. ಏಸು ಕ್ರಿಸ್ತರನ್ನು ಶಿಲುಬೆಗೇರಿಸಿದ ದಿನವಾದ ನಿನ್ನೆ ದೇಶಾದ್ಯಂತ ಶುಭ ಶುಕ್ರವಾರವನ್ನು ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ಯೇಸು ಕ್ರಿಸ್ತರ ಪುನರುತ್ಥಾನವನ್ನು ಸೂಚಿಸುವ, ಪವಿತ್ರ ಶುಕ್ರವಾರದಂದು, ಚರ್ಚ್‌ಗಳು ಮತ್ತು ಪ್ರಾರ್ಥನಾ ಮಂದಿರಗಳಲ್ಲಿ, ವಿಶೇಷ ಪ್ರಾರ್ಥನೆ ಮತ್ತು ಸಾಮೂಹಿಕ ಪ್ರಾರ್ಥನೆಗಳು ಜರುಗಿದವು.

<><><>

ಇಂದು ಶನಿವಾರ ಜಾಗರಣೆ ಹಬ್ಬದ ಆಚರಣೆ. ನಾಳೆ 31 ರಂದು ಈಸ್ಟರ್ ಭಾನುವಾರದ ಆಚರಣೆ. ಮಂಗಳೂರು ಸಭಾಪ್ರಾಂತ್ಯದ ಬಿ ್ಪ್ ಡಾಕ್ಟರ್ ಪೀಟರ್ ಪೌಲ್ ಸಾಲ್ಡಾನಾ ಸಂದೇಶ ನೀಡಲಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಯೇಸು ಕ್ರಿಸ್ತನ ತ್ಯಾಗವನ್ನು ಸ್ಮರಿಸಿದ್ದಾರೆ.

<><><>

ಧಾರವಾಡದ ಸಿ.ಎಸ್.ಐ. ಹೆಬಿಕ್ ಸ್ಮಾರಕ ದೇವಾಲಯ ಸೇರಿದಂತೆ, ಮಂಗಳೂರು, ದಕ್ಷಿಣಕನ್ನಡ ಜಿಲ್ಲೆ, ಉತ್ತರಕನ್ನಡ ಜಿಲ್ಲೆ, ಚಿತ್ರದುರ್ಗ, ದೊಡ್ಡಬಳ್ಳಾಪುರ ಹಾಗೂ ಗದಗ್‌ನ ಚರ್ಚ್‌ಗಳಲ್ಲಿ ಕ್ರೈಸ್ತ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದ ವರದಿಗಳು ಬಂದಿವೆ.

<><><>

ಕೊಡಗು ಜಿಲ್ಲೆಯ ನಾಪೋಕ್ಲು ಗ್ರಾಮದಲ್ಲಿ, ಇಂದಿನಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆರಂಭವಾಗಲಿದೆ. ಕೊಡವರಲ್ಲಿ ಹಾಕಿ ಪಂದ್ಯಾಟದ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ, 24 ವ ್ಗಗಳ ಹಿಂದೆ ಆರಂಭಗೊಂಡ, ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು, ಈ ವ ್ಗ ಕುಂಡ್ಯೋಳಂಡ ಕೊಡವ ಕುಟುಂಬಸ್ಥರು ಆಯೋಜಿಸಿದ್ದಾರೆ. 1 ತಿಂಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ, ದಾಖಲೆಯ 350 ಕುಟುಂಬಗಳ 3 ಸಾವಿರಕ್ಕೂ ಅಧಿಕ ಹಾಕಿ ಪಟುಗಳು ಪಾಲ್ಗೊಳ್ಳಲಿದ್ದಾರೆ. ಮೂರು ಮೈದಾನಗಳಲ್ಲಿ ಇಂದಿನಿಂದ, ಏಪ್ರಿಲ್ 30ರ ವರೆಗೆ ಪಂದ್ಯಾವಳಿಗಳು ಜರುಗಲಿವೆ. ಮುಖ್ಯ ಮೈದಾನದಲ್ಲಿ ಏಕಕಾಲಕ್ಕೆ 30 ಸಾವಿರ ಪ್ರೇಕ್ಷಕರು ಕುಳಿತು ಹಾಕಿ ಪಂದ್ಯಾವಳಿ ವೀಕ್ಷಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಾಜಿ ಉಪಪ್ರಧಾನಿ ಲಾಲಕೃಷ್ಣ ಅಡ್ವಾಣಿ, ಹಸಿರು ಕ್ರಾಂತಿಯ ಹರಿಕಾರ, ಖ್ಯಾತ ಕೃಷಿ ತಜ್ಞ ದಿವಂಗತ ಡಾಕ್ಟರ್ ಸ್ವಾಮಿನಾಥನ್ ಸೇರಿದಂತೆ, ಐವರು ಗಣ್ಯರಿಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ದಿಲ್ಲಿಯಲ್ಲಿ ಇಂದು, ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾದ ಭಾರತ ರತ್ನವನ್ನು ಪ್ರದಾನ ಮಾಡಲಿದ್ದಾರೆ.

<><><>

ಬೆಂಗಳೂರಿನಲ್ಲಿ ಇಂದು ಮತ್ತು ನಾಳೆ ರಾಷ್ಟ್ರೀಯ ಬೀದಿಬದಿಯ ಆಹಾರ ಉತ್ಸವವನ್ನು ಏರ್ಪಡಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ; ಮತದಾರ ಜಾಗ್ರತಿಗಾಗಿ, ಜಿಲ್ಲಾಡಳಿತಗಳಿಂದ ವಿಶೇಷ ಪ್ರಯತ್ನ.
- ಬಿಸಿ ಗಾಳಿ, ವಿಪರೀತ ಸೆಕೆ; ಹವಾಮಾನದ ಮಾಹಿತಿ ಪಡೆದು, ಅಂದಿನ ಕೆಲಸ ಯೋಜಿಸಿಕೊಳ್ಳುವಂತೆ, ವಾರ್ತಾ ಇಲಾಖೆ ಮನವಿ.

- ಕ್ರೈಸ್ತ ಬಾಂಧವರಿಂದ, ಇಂದು ಜಾಗರಣೆ; ನಾಳೆ ಈಸ್ಟರ್ ಭಾನುವಾರ ಆಚರಣೆ.
- ಕೊಡಗು ಜಿಲ್ಲೆಯ ನಾಪೋಕ್ಲುವಿನಲ್ಲಿ, ಇಂದಿನಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆರಂಭ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ